ಮಗುವಿನಲ್ಲಿ ಯಾವ್ಯಾವ ಮಗು ಬದುಕಿದ್ದರೆ ಏನು ಆಗುತ್ತಿತ್ತೋ, ಗೊತ್ತಿಲ್ಲ. ಯಾವ ಮಗು ಭಗತ್‌ಸಿಂಗ್ ಆಗುತ್ತಿತ್ತೋ, ಯಾವ ಮಗು ಸುಭಾಷ್‌ಚಂದ್ರ ಬೋಸ್ ಆಗುತ್ತಿತ್ತೋ, ಯಾವ ಮಗು ಡಾ: ರಾಮನ್ ಆಗುತ್ತಿತ್ತೋ ನಮಗೆ ಗೊತ್ತಿಲ್ಲ. 300 ಜನ ಮಕ್ಕಳು ಸುಟ್ಟು ಕರಕಲಾಗಿ ಬಿಟ್ಟರು. ಏನು ಮಾಡಿದ್ದೇವೆ ನಾವು? ಪ್ರಶ್ನೆ ಮಾಡಿಕೊಳ್ಳಿ. ಇಲ್ಲಿ ಇದ್ದವರ ಯಾರ ಮಕ್ಕಳು ಸಾಯಲಿಲ್ಲ. ಸತ್ತವರ ಮಕ್ಕಳ ತಂದೆತಾಯಿಗಳು ಇಲ್ಲಿಗೆ ಬರಲಿಲ್ಲ. ಗಂಗಾರಾಂ ಕಟ್ಟಡ ಕುಸಿದು ಬಿದ್ದುಹೋಯಿತು. ಏನು ಮಾಡಿದ್ದೇವೆ? ಸಾರಾಯಿ ದುರಂತ ಏನು ಮಾಡಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಏನು ಹೀಗೆ ಕೇಳುತ್ತೀರಿ. ಸಂಬಂಧಪಟ್ಟಿರುವವರಿಗೆಲ್ಲಾ ನಾವು ಪ್ರೊಮೋಷನ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಅದಕ್ಕೇ ನಾನು ಹೇಳಿದ್ದುದು. ನಾನು ಏನು ಹೇಳುತ್ತೇನೆ ಎಂದರೆ, ಆತ್ಮವಂಚನೆ ಮಾಡಿಕೊಳ್ಳದೆ ನ್ಯಾಯವಾಗಿ ಮಾತನಾಡುವುದಾದರೆ ಒಂದಲ್ಲ, ಎರಡು ದಿವಸ ಪ್ರತ್ಯೇಕವಾಗಿ ಈ ವಿಚಾರಗಳನ್ನು ಚರ್ಚೆ ಮಾಡೋಣ. ಎಲ್ಲಿ ಜಾತಿ ಅಡ್ಡ ಬರುತ್ತದೆ, ಎಲ್ಲಿ ಕುಲ ಬರುತ್ತದೆ, ಎಲ್ಲಿ ಹಣ ಬರುತ್ತದೆ, ಎಲ್ಲ ಪಕ್ಷ ಬರುತ್ತದೆ, ಅವುಗಳಿಗೆಲ್ಲಾ ಒಳಗಾಗಿ ನಾವು ಯಾವಯಾವ ರೀತಿಯ ಜನದ್ರೋಹವನ್ನು ಈ ಸದನದ ಹೆಸರಿನಲ್ಲಿ ಮಾಡುತ್ತೇವೆ. ಈ ಎಲ್ಲಾ ವಿಚಾರಗಳಲ್ಲೂ ನಿರ್ವಿಕಾರವಾದಂಥ ಮನಸ್ಸಿನಿಂದ ಎಲ್ಲರೂ ಚರ್ಚೆ ಮಾಡೋಣ. ಯಾರು ಬೇಡ ಎಂದು ಹೇಳಿದರು. ಮಾಡೋಣ ಅದಕ್ಕೆ ನಾನು ಒಪ್ಪುತ್ತೇನೆ. ಈಗ ಶ್ರೀನಿವಾಸ್ ಅವರು ಶೂನ್ಯ ವೇಳೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಮಾಡಿ. ಆದರೆ ಏಕೆ ಹೋದರು ಎಂದು ನಮಗೆ ಹೇಳಿದರೆ ಸಾಕು. ಚರ್ಚೆಗೇ ಒಂದು ದಿವಸವನ್ನು ಫಿಕ್ಸ್ ಮಾಡುವುದಾದರೆ ಮಾಡಿ ಹೇಳದೇ ಕೇಳದೇ ಏಕೆ ಹೋದರು, ಇದು ಸರಿಯಲ್ಲ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬಂದು ಹೇಳುತ್ತಾರೆ. ಶ್ರೀನಿವಾಸ್‌ರವರೇ, ಪ್ರಸ್ತಾಪ ಮಾಡಿ.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ : ಬಿಜಾಪುರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಮಾತನಾಡಲು ತಾವು ಅವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ನೀವು ಒಂದು ನೋಟೀಸ್ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಈ ವಿಚಾರವಾಗಿ ಒಂದು ಹೇಳಿಕೆ ಮಾಡುತ್ತೇನೆ.

ಅಧ್ಯಕ್ಷರು : ಹೇಳಿಕೆಯನ್ನು ಆಮೇಲೆ ಮಾಡಿಸುತ್ತೇನೆ. ಈಗ ಶ್ರೀನಿವಾಸ್‌ರವರು.

ವಿಶ್ವಭಾರತಿ ಹೌಸಿಂಗ್ ಸೊಸೈಟಿಯವರು ಗಿರಿನಗರ ಹತ್ತಿರ25 ಎಕರೆ ಸರ್ಕಾರಿ ಜಮೀನಿಗೆ ಬೋಗಸ್ ದಾಖಲೆ ಸೃಷ್ಟಿ ಮಾಡಿ ಮಾರಾಟ ಮಾಡುತ್ತಿರುವುದು

+ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ವಿಶ್ವಭಾರತಿ ಕೋ ಆಪರೇಟೀವ್ ಸೊಸೈಟಿಯ ಬಗ್ಗೆ ನಾನು ಹಿಂದೆಯೂ ಇಲ್ಲಿ ಪ್ರಶ್ನೆ ಮಾಡಿದ್ದೆ. ಇದು ಈ ಸದನದಲ್ಲಿ ಚರ್ಚೆಯಾಗಿದೆ.

ಸುಮಾರು 25 ಎಕರೆ ಜಮೀನು, ಅದರ ಅಂದಾಜು ಬೆಲೆ 50 ಕೋಟಿ ರೂಪಾಯಿ. ಈ ಜಮೀನು ಸರ್ಕಾರದ್ದು.

(ಈ ಹಂತದಲ್ಲಿ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ. ಮಾಮನಿ) ರವರು ಪೀಠವನ್ನಲಂಕರಿಸಿದರು)

ಈ ಸರ್ಕಾರದ ಜಮೀನನ್ನು ವಿಶ್ವಭಾರತಿ ಕೋ ಆಪರೇಟೀವ್ ಸೊಸೈಟಿಯವರು ಮಾರಿರತಕ್ಕಂಥಾದ್ದು ಇದೆ. ಇದಕ್ಕೆ ಸದನದಲ್ಲಿ ಮಂತ್ರಿಗಳು ಏನು ಹೇಳಿದರು ಎಂದರೆ, ಯಾರೇ ಒತ್ತುವರಿ ಮಾಡಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ನಾನು ಹೋಗಿ ಜಾಗವನ್ನು ನೋಡಿಕೊಂಡು ಬರುತ್ತೇನೆ ಎಂದು ಸದನದಲ್ಲಿ ಒಪ್ಪಿಕೊಂಡರು. ಆ ಜಾಗಕ್ಕೆ ಮಂತ್ರಿಗಳು ಬಂದಿದ್ದರು. ನಾನೂ ಅವರ ಜೊತೆಯಲ್ಲಿ ಹೋದೆ. ಅಧಿಕಾರಿಗಳೂ ಒಬ್ಬರೋ ಇಬ್ಬರೋ ಬಂದಿದ್ದರು. ಗಿರಿನಗರದ ಹತ್ತಿರ 25 ಎಕರೆ ಸರ್ಕಾರೀ ಜಮೀನನ್ನು ವಿಶ್ವಭಾರತಿ ಸೊಸೈಟಿಯವರು ಬೋಗಸ್ ದಾಖಲೆಗಳನ್ನು ಸೃಷ್ಟಿ ಮಾಡಿ ಮಾರುತ್ತಿದ್ದಾರೆ. ಇವತ್ತು ಅದರ ಬೆಲೆ 50 ಕೋಟಿ ರೂಪಾಯಿಗಳು. ನಾನು ಹೇಳಿದ ಹಾಗೆ ಇದನ್ನು ಮಂತ್ರಿಗಳು ಇನ್ಸ್‌ಪೆಕ್ಷನ್ ಮಾಡಿದರು. ಕೂಡಲೇ ಒಬ್ಬರನ್ನು ಸ್ಪಾಟ್‌ನಲ್ಲೇ ಸಸ್ಪೆಂಡ್ ಮಾಡಿದರು. ಅದು ಆದಮೇಲೆ ಮತ್ತೆ ಅವರು ರಿವೋಕ್ ಮಾಡಿದರು. ಇವತ್ತಿನವರೆಗೂ ಯಾವುದೇ ಕಟ್ಟಡ ಕಟ್ಟಬೇಡಿ ಎಂದು ಹೇಳಿ ಬಂದರೂ, ಇವತ್ತು ಆ ಜಾಗದಲ್ಲಿ ಸೈಟ್‌ಗಳು ಮಾರಾಟವಾಗುತ್ತಿವೆ ಮತ್ತು ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ. ಎಷ್ಟೆಷ್ಟು ಕಟ್ಟುತ್ತಿರುವುದು ಎಂದರೆ ಒಂದು ಅಂತಸ್ತು ಅಲ್ಲ, ಐದು ಅಂತಸ್ತು. ಇದು ಯಾವ ಜಮೀನು? ಅವನ ಸ್ವಂತ ಹಿಡುವಳಿ ಜಮೀನನ್ನು ಅಕ್ವಿಸಿಷನ್ ಮಾಡುವುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಇದು ಸರ್ಕಾರದ ಜಮೀನು. 50 ಕೋಟಿ ರೂಪಾಯಿ ಬೆಲೆಯ ಜಮೀನನ್ನು ಯಾವುದೇ ಪ್ಲಾನ್ ಅಪ್ರೂವಲ್ ಇಲ್ಲದೆ ಬಿ ಡಿ ಎ ಪ್ಲಾನ್ ಅಪ್ರೂವಲ್ ಇಲ್ಲದೇ, ಸರ್ಕಾರ ಅನುಮತಿ ಕೊಡದೇ, ಮಂತ್ರಿಗಳು ಅಲ್ಲಿಗೆ ಹೋಗಿ ಬಂದ ಮೇಲೂ, ಸರ್ಕಾರದವರು ಹೋಗಿ ಬಂದ ಮೇಲೂ, ಇವತ್ತಿಗೂ ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ, ಮಾರುತ್ತಿದ್ದಾರೆ. ಇದಕ್ಕೆ ಇವತ್ತು ಸರ್ಕಾರ ಉತ್ತರವನ್ನು ಕೊಡಬೇಕು. ಉತ್ತರವನ್ನು ಕೊಡಬೇಕಾದರೆ ಆ ಜಮೀನನ್ನು ನಾವು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ, ಎಷ್ಟು ಕಟ್ಟಡಗಳನ್ನು ಕಟ್ಟಲಾಗಿದೆ, ಆ ಕಟ್ಟಡಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂಬುದನ್ನು ಹೇಳಬೇಕು. ಸರ್ವೆ ಮಾಡಿದ್ದಾರೆ. ಡಿ.ಸಿ. ರಿಪೋರ್ಟ್ ಇದೆ. ನನ್ನ ರಿಪೋರ್ಟ್‌ನಲ್ಲಿ 19 ಎಕರೆ 20 ಗುಂಟೆ ಎಂದು ನನ್ನ ಸರ್ವೆ ರಿಪೋರ್ಟ್‌ನಲ್ಲಿ ಬಂದಾಗ, ಡಿ.ಸಿ. ರಿಪೋರ್ಟ್‌ನಲ್ಲಿ 23 ಎಕರೆ 30 ಗುಂಟೆ ಎಂದು ಬಂದಿದೆ. ಡಿ.ಸಿ. ರಿಪೋರ್ಟ್ ಸರಿ ಇದೆ. ಆದಾದ ಮೇಲೆ ಸಿಓಡಿಗೆ ಈ ಕೇಸನ್ನು ರೆಫರ್ ಮಾಡಿದ್ದಾರೆ. ಸಿ ಓ ಡಿ ಗೆ ರೆಫರ್ ಮಾಡಿ 2 ವರ್ಷವಾಯಿತು. ಸಿ ಓ ಡಿ ಯಲ್ಲಿ ತನಿಖೆಯಾಗಿದೆ. ಸಿ ಓ ಡಿ ರಿಪೋರ್ಟ್ ಇದೆ. ಇಷ್ಟಿದ್ದರೂ ಇವತ್ತು ನೀವು ಸರ್ಕಾರದವರು, ಪ್ಲಾನ್ ಅಪ್ರೂವಲ್ ಇಲ್ಲದೆ ಏನೂ ಇಲ್ಲದೇ ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ, xxx ಇದನ್ನು ಒಂದು ವರ್ಷದಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ಆಗ ಇದ್ದಂಥ ರೆವಿನ್ಯೂ ಮಿನಿಸ್ಟರ್ ಕಾಲದಿಂದಲೂ, ಪ್ರಸ್ತಾಪ ಮಾಡುತ್ತಿದ್ದೇನೆ,

(xx ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಹಿಂದಿನಿಂದ ಇವತ್ತಿನಿಂದ ಅಲ್ಲ. ಆವತ್ತಿನಿಂದ ಇವತ್ತಿನವರೆಗೆ ಪ್ಲಾನ್ ಅಪ್ರೂವಲ್ ಹೇಗೆ ಆಯಿತು, ಅವರಿಗೆ ಕೆ ಇ ಬಿ ಪರ್ಮಿಷನ್ ಹೇಗೆ ಸಿಕ್ಕಿತು? ಇದು ಒಂದು ಅಂತಸ್ತಿಗೆ ಅಲ್ಲ, ಐದು ಅಂತಸ್ತುಗಳಿಗೆ ಇವತ್ತಿನ ದಿವಸ ಸರ್ಕಾರ ಈ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಇದಕ್ಕೆ ಸರಿಯಾದ ಉತ್ತರವನ್ನು ತಾವು ಕೊಡಲಿಲ್ಲ ಎಂದರೆ ನಾವು ಧರಣಿ ಕುಳಿತುಕೊಳ್ಳುತ್ತೇವೆ.

+ಶ್ರೀ ರಮೇಶ್ ಸಿ ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಶ್ರೀನಿವಾಸ್‌ರವರು ಬಹಳ ಗಂಭೀರವಾದ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿ ಎನ್ನುವ ಗಂಭೀರವಾದಂಥ ಆಪಾದನೆಯನ್ನು ಮಾಡಿದ್ದಾರೆ. ಅವರು ಆಪಾದನೆ ಮಾಡಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ ಇಷ್ಟೆಲ್ಲಾ ಅವರು ಹೇಳಿದ ಮೇಲೆ, ಸಿನ್ಸಿಯರ್ ಆಗಿ ಸರ್ಕಾರದವರು ತಮ್ಮ ಕರ್ತವ್ಯವನ್ನು ಮಾಡಿಯಾದ ಮೇಲೆ, ಅವರು ಮಾಡಿರತಕ್ಕಂಥ ಆಪಾದನೆಯನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಎಂ. ಶ್ರೀನಿವಾಸ್ : ಹೇಗೆ ವಾಪಸ್ಸು ತೆಗೆದುಕೊಳ್ಳುವುದು? ಇವತ್ತು ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ನೀವು ಏನು ಹೇಳಿದಿರಿ ಅದನ್ನು ನಾವು ಕೇಳಿದೆವು. ನಾವು ಏನು ಹೇಳುತ್ತೇವೆ ಅದನ್ನು ನೀವು ಕೇಳುವಂಥ ಸೌಜನ್ಯತೆ ನಿಮಗೆ ಇರಬೇಕಾಗುತ್ತದೆ. ಅದಕ್ಕೆ ಮೊದಲು ಅವರು ಆಪಾದನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಕೃಷ್ಣ ಭಟ್ಟ ಯಾರು ಎಂದು ನಮಗೆ ಯಾರಿಗೂ ಗೊತ್ತಿಲ್ಲ. ಅವನ ಮುಖವನ್ನು ನಾವು ನೋಡಿಲ್ಲ. ಮಾನ್ಯ ಸದಸ್ಯರು ಬಂದು ನನ್ನ ಗಮನಕ್ಕೆ ತಂದ ಮೇಲೆ ನಾನೇ ಖುದ್ದಾಗಿ ಸ್ಥಳ ಪರೀಕ್ಷೆ ಮಾಡಿ, ಸಂಬಂಧಪಟ್ಟ ಕೆಲವೊಂದು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದೇನೆ. ಅಷ್ಟೇ ಅಲ್ಲದೆ, ಮರುದಿವಸವೇ ಫೈಲ್ ತರಿಸಿ 24 ಎಕರೆ ಜಮೀನನ್ನು ಸರ್ಕಾರದಿಂದ ಮುಟ್ಟುಗೋಲು ಹಾಕಿಕೊಂಡಿದ್ದೇನೆ. ಅವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಬೇಕು ಎಂದು ಆದೇಶ ಮಾಡಿದ್ದೇನೆ. ಇಷ್ಟೆಲ್ಲಾ ಮಾಡಿದ್ದರೂ ಈ ಆಪಾದನೆ ಏನು ಮಾಡುತ್ತೀರಿ, ಇದು ಸರಿಯಾದುದಲ್ಲ. ಅವರು ಹೇಳುವುದನ್ನೆಲ್ಲಾ ಕೇಳಿಸಿಕೊಂಡು ಇಲ್ಲಿ ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ಅದಕ್ಕೆ ಅವರು ವಾಪಸ್ಸು ತೆಗೆದುಕೊಳ್ಳಬೇಕು. ಇದರ ಮೇಲೆ ಈಗಾಗಲೇ ನಾವು ಕ್ರಮ ಜರುಗಿಸಿದ್ದೇವೆ. ಆ ರೀತಿ ಸದನದಲ್ಲಿ ಆಪಾದನೆ ಮಾಡುವುದು ಸರಿಯಲ್ಲ. ಬೇಕಾದರೆ ಪುನಃ ಅವರು ನಾಳೆ ಬರಲಿ. ಅಲ್ಲಿ ಈ ಕಟ್ಟಡ ಕಟ್ಟುತ್ತಿದ್ದಾರೆ ಎಂದು ಅವರು ಶೂನ್ಯವೇಳೆಯಲ್ಲಿ ಹೇಳಿದ್ದಾರೆ. ಪುನಃ ನಾನು ತಕ್ಷಣ ಹಿರಿಯ ಅಧಿಕಾರಿಗಳನ್ನು ಸೈಟ್‌ಗೆ ಕಳುಹಿಸುತ್ತೇನೆ. ಅವನು ಯಾರೇ ಮಹಾಪಂಡಿತ ಇರಲಿ ಅದನ್ನು ನಾವು ಕೇಳುವುದಿಲ್ಲ. ಅವನು ಎಷ್ಟೇ ದೊಡ್ಡವನಾಗಿರಲಿ, ಸಣ್ಣವನಾಗಿರಲಿ, ಕಾನೂನು ಇರುವುದು ಎಲ್ಲರಿಗೂ ಒಂದೇ. ಸಾಹುಕಾರರಿಗೆ ಒಂದು ಕಾನೂನು, ಬಡವರಿಗೆ ಒಂದು ಕಾನೂನು ಮಾಡಲು ಆಗುವುದಿಲ್ಲ. ಬೆಂಗಳೂರಿನಲ್ಲಿ ಇದು ಒಂದೇ ಅಲ್ಲ. ಇನ್ನೂ ಇಂಥ ಅತಿರಥ-ಮಹಾರಥರಾದಂಥ ಬಹಳ ಜನರು ಸರ್ಕಾರೀ ಜಮೀನನ್ನು ತಮ್ಮ ವಶಕ್ಕೆ ಕಬಳಿಸಿಕೊಂಡಿದ್ದಾರೆ. ಇದನ್ನೆಲ್ಲಾ ನಾವು ಗಮನಿಸಿ ಇವತ್ತು ಮುನಿಕೃಷ್ಣರವರ ಅಧ್ಯಕ್ಷತೆಯಲ್ಲಿರತಕ್ಕಂಥ ಟಾಸ್ಕ್ ಫೋರ್ಸ್ ಏನಿದೆ, ಆ ಟಾಸ್ಕ್ ಫೋರ್ಸಿಗೆ ಈಗಾಗಲೇ ನಾವು ಎಲ್ಲಾ ಕೇಸುಗಳನ್ನು

ಟ್ರಾನ್ಸ್‌ಫರ್ ಮಾಡಿದ್ದೇವೆ. ಅದಕ್ಕೆ ದಯವಿಟ್ಟು ಶ್ರೀನಿವಾಸ್‌ರವರು ಆ ರೀತಿ ಆಪಾದನೆ ಮಾಡುವುದು ಸರಿಯಲ್ಲ. ತಾವು ಏನು ಹೇಳಿದ್ದೀರಿ, ಅದಕ್ಕೆ ನಾನು ಸ್ಥಳ ಪರೀಕ್ಷೆ ಮಾಡಿದ್ದೇನೆ, ಆಮೇಲೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಮಾಡಿದ್ದೇನೆ. ಅವರ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಬೇಕು ಎಂದು ನಾನು ಆದೇಶ ಮಾಡಿದ್ದೇನೆ. ಇಷ್ಟೆಲ್ಲಾ ಮಾಡಿದರೂ ತಾವು ಆ ರೀತಿ ಹೇಳುವುದು ಸರಿಯಲ್ಲ. ಅಲ್ಲಿ ಇನ್ನೂ ಕೂಡ ಅವರು ಕಟ್ಟಡ ಕಟ್ಟುತ್ತಿದ್ದರೆ ಪುನಃ ನಾನು ನಾಳೆಯೇ ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ನಮ್ಮ ಅಧಿಕಾರಿಗಳನ್ನು ಕಳುಹಿಸಿ ಅದನ್ನು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ನಿಮ್ಮ ಪ್ರಶ್ನೆಗೆ ಈಗ ಉತ್ತರವನ್ನು ಹೇಳಿದ್ದಾರೆ. ನಿಮ್ಮ ಪ್ರಶ್ನೆಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ಸ್ವಲ್ಪ ಇರಿ ಸ್ವಾಮಿ. ಇದು ಸಣ್ಣ ಕೆಲಸ ಅಲ್ಲ. ನನ್ನ ಕ್ಷೇತ್ರಕ್ಕೆ ದಿನಾ ಬೆಳಿಗ್ಗೆ ಹೋಗುತ್ತಾ ನೋಡುತ್ತಿದ್ದೇನೆ. ಅವರು ಏನು ಹೇಳಿದರು, ಕೃಷ್ಣಭಟ್ಟರ ಜೊತೆ ಶಾಮೀಲಾಗಿಲ್ಲ ಎಂದು, ಇರಲಿ, ಆ ರೀತಿ ತಪ್ಪು ಏನಾದರೂ ಬಂದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇಲ್ಲ ಎಂದು ಅಲ್ಲ. ನಾನೇನೂ ಹಾಗೆ ಹಠ ಹಿಡಿಯುವಂಥವನಲ್ಲ. ಮಾನ್ಯ ಮಂತ್ರಿಗಳು ಯಾವತ್ತು ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿ. ಇದು ಕಳೆದ ಸಲ ಬಂದಿದ್ದರಿಂದ ಅನುಮತಿಯನ್ನು ಕೇಳಿದ್ದೇನೆ. ಕಳೆದ ಸಲ ಕೇಳಿದ್ದಕ್ಕೆ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಇದನ್ನು ಹೇಳುತ್ತಿದ್ದೇನೆ. ಶೂನ್ಯವೇಳೆಯಲ್ಲಿ ಮಾಡಿರುವ ಮೊದಲನೇ ಪ್ರಸ್ತಾಪ ಅಲ್ಲ ಇದು. ಈಗಾಗಲೇ ಹಲವಾರು ಸಾರಿ ಪ್ರಸ್ತಾಪ ಮಾಡಿದ್ದು ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಶೂನ್ಯ ವೇಳೆಯಲ್ಲಿ ಈ ರೀತಿ ಚರ್ಚೆ ಮಾಡಲು ಆಗುವುದಿಲ್ಲ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಸರಿಯಾದಂಥ ಉತ್ತರ ಕೊಟ್ಟಿದ್ದಾರೆ. ತಾವು ಡಿಬೇಟ್ ಮಾಡುವಂಥಾದ್ದು ಏನು ಇದೆ ಇದರಲ್ಲಿ?

ಶ್ರೀ ಎಂ. ಶ್ರೀನಿವಾಸ್ : ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ರೆವಿನ್ಯೂ ಮಿನಿಸ್ಟರ್ ಸಿಂಧ್ಯಾರವರೋ, ಇವರೋ ಗೊತ್ತಾಗುತ್ತಿಲ್ಲ. ಸಿಂಧ್ಯಾರವರು ಸಾರಿಗೆ ಬಗ್ಗೆ ಉತ್ತರ ಕೊಡಲಿ ಪರವಾಗಿಲ್ಲ.

ಉಪಾಧ್ಯಕ್ಷರು : ಅವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಶೂನ್ಯವೇಳೆಯಲ್ಲಿ ಚರ್ಚೆ ಮಾಡತಕ್ಕದ್ದಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್ : ಮಂತ್ರಿಗಳಿಗೆ ಉಪ ಪ್ರಶ್ನೆ ಕೇಳುತ್ತಿದ್ದೇನೆ. ಈಗ ನಾನು ಹೇಳುವುದು ಇಷ್ಟೇ.

ಉಪಾಧ್ಯಕ್ಷರು : ಈಗ ತಾವು ದಯವಿಟ್ಟು ಕುಳಿತುಕೊಳ್ಳಿ. ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ ಎಂದರೆ ನಾವು ಏನು ಮಾಡುವುದು? ಏನು ಹೇಳುವುದು ನೀವು? ಮೊದಲು ಕುಳಿತುಕೊಳ್ಳಿ. ಈಗ ನೀವು ಪ್ರಶ್ನೆ ಕೇಳಿದ್ದೀರಿ, ಅವರು ಉತ್ತರ ಹೇಳಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ಅವರು ಜಮೀನನನ್ನು ಇನ್ನೂ ವಾಪಸ್ಸು ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು : ಈಗ ಅವರು ಮುಟ್ಟುಗೋಲು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ವಾಪಸ್ಸು ತೆಗೆದುಕೊಂಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ತೆಗೆದುಕೊಂಡಿದ್ದರೆ ಆರ್ಡರ್ ಕೊಡಿಸಿಕೊಡಿ. ಅದು ಆರ್ಡರ್ ತೆಗೆದುಕೊಂಡಿದ್ದಾರೆ, ಅದನ್ನು ಕೊಡಿಸಿ.

ಉಪಾಧ್ಯಕ್ಷರು : ನೀವು ಪ್ರಶ್ನೆ ಹಾಕಿ. ಅವರು ಉತ್ತರ ಕಳುಹಿಸುತ್ತಾರೆ. ನೀವು ಹೀಗೆ ನಿಂತ ಕಾಲಮೇಲೇ ಆರ್ಡರ್ ಕೊಡಿಸಿ ಎಂದರೆ ಎಲ್ಲಿಂದ ಕೊಡುವುದು?

ಶ್ರೀ ಎಂ. ಶ್ರೀನಿವಾಸ್ : ಸರ್ಕಾರಿ ಜಮೀನನ್ನು ವಾಪಸ್ಸು ತೆಗೆದುಕೊಂಡಿಲ್ಲ. ತೆಗೆದುಕೊಂಡಿದ್ದರೆ, ಅದರ ಆರ್ಡರ್‌ನ್ನು ತಮ್ಮ ಮುಂದೆ ಟೇಬಲ್ ಮೇಲೆ ಇಡಲಿ. ಆಮೇಲೆ ನೋಡೋಣ. ಈಗ ನಾನು ಧರಣಿ ಮಾಡುತ್ತೇನೆ.

(ಶ್ರೀ ಎಂ. ಶ್ರೀನಿವಾಸ್‌ರವರು ಬಾವಿಗೆ ಧಾವಿಸಿದರು)

ಉಪಾಧ್ಯಕ್ಷರು : ಶೂನ್ಯವೇಳೆಯಲ್ಲಿ ತಾವು ಪ್ರಶ್ನೆ ಕೇಳಿದ್ದೀರಿ ಅವರು ಉತ್ತರ ಕೊಟ್ಟಿದ್ದಾರೆ. ಇವೊತ್ತೇ ಆರ್ಡರ್ ಬೇಕು ಎಂದರೆ ತಾವು ಪ್ರಶ್ನೆ ಕೇಳಿ ಅವರು ಉತ್ತರವನ್ನು ಕಳುಹಿಸುತ್ತಾರೆ. ತಾವು ಈ ರೀತಿ ಮಾಡಿದರೆ ಹೇಗೆ? ತಾವು ಹಿರಿಯ ಸದಸ್ಯರು ಈ ರೀತಿ ಉದ್ವೇಗಕ್ಕೆ ಒಳಗಾಗಬಾರದು. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ಶೂನ್ಯ ವೇಳೆಯಲ್ಲಿ ಚರ್ಚೆ ಉತ್ತರ ಮಾಡತಕ್ಕಂಥದ್ದಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರು ಡೀಟೈಲ್ಡ್ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ ಬೇಕಾದರೆ ನಾಳೆ ಕೊಡುತ್ತೇನೆ ಎಂದು ಹೇಳಿದ್ದಾರೆ. ನೀವು ಧರಣಿ ಕುಳಿತುಕೊಂಡರೆ ಹೇಗೆ? ನಾಳೆ ಸಮರ್ಪಕವಾದ ಉತ್ತರವನ್ನು ಕೊಡುತ್ತಾರೆ.

ಉಪಾಧ್ಯಕ್ಷರು : ತಾವು ಕೇಳಿರುವ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಹೋಗಿ. ಇನ್ನೂ ಏನಾದರೂ ಇದ್ದರೆ ಬೇರೆ ರೂಪದಿಂದ ಪ್ರಶ್ನೆಯನ್ನು ಕೇಳಿ, ಉತ್ತರವನ್ನು ತರಿಸಿಕೊಡುತ್ತೇನೆ. ನೀವು ಈ ರೀತಿ ಮಾಡಿದರೆ ಹೇಗೆ? ಆದ್ದರಿಂದ ತಾವು ತಮ್ಮ ಸ್ಥಾನಕ್ಕೆ ಹೋಗಿ. ನೀವು ಹಿರಿಯ ಸದಸ್ಯರಾಗಿದ್ದವರು ಈ ರೀತಿ ಮಾಡಿದರೆ ಸದನ ಹೇಗೆ ನಡೆಸಬೇಕು? ಶೂನ್ಯ ವೇಳೆಯಲ್ಲಿ ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ ಎಂದಮೇಲೆ, ಎವಿಕ್ಷನ್ ಆಗಿ ಡಿಮಾಲಿಷನ್ ಆಗಬೇಕು. ಆ ಕೆಲಸವನ್ನು ಮಾಡಬೇಕಲ್ಲವೇ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಂದಾಯ ಸಚಿವರು ಎರಡು ವಿಚಾರವನ್ನು ಶ್ರೀನಿವಾಸ್‌ರವರಿಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿ ಏನಾದರೂ ಕನ್‌ಸ್ಟ್ರಕ್ಷನ್ ಮಾಡುತ್ತಿದ್ದರೆ ಕೂಡಲೇ ನಮ್ಮ ಅಧಿಕಾರಿಗಳಿಗೆ ಕಳುಹಿಸಿ ಕನ್‌ಸ್ಟ್ರಕ್ಷನ್‌ನ್ನು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇನ್ನು 22 ಎಕರೆ ಮುಟ್ಟುಗೋಲು ಹಾಕಿಕೊಂಡಿದ್ದೇವೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆ ಎಂದು ಹೇಳಿದ್ದಾರೆ. ನೀವು ಹೋದ ಸಾರಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದೀರಿ.

ಶ್ರೀ ಎಂ. ಶ್ರೀನಿವಾಸ್ : ಆದರೆ ಅವರು ಅಲ್ಲಿ ಕನ್‌ಸ್ಟ್ರಕ್ಷನ್ ನಡೆಸುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಈ ಸದನ ಮುಗಿಯುವುದಕ್ಕೆ ಮುಂಚೆ ಕೂಡಲೇ ಅದನ್ನು ನಿಲ್ಲಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : ನಾವು ಸದನದ ನಿಯಮಗಳ ಪ್ರಕಾರ ಹೋಗಬೇಕಾಗುತ್ತದೆ. ಶೂನ್ಯವೇಳೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದರೂ ಕೂಡ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ನೀವು ಮಾಡಿದರೆ ಹೇಗೆ? ಈಗ ಏನು ಮಾಡಬೇಕೆಂದು ಹೇಳುತ್ತೀರಿ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳಿದ ಪ್ರಕಾರ 24 ಎಕರೆ ಸರ್ಕಾರಿ ಜಮೀನು ಎಂದು ಆದ ಮೇಲೆ, ಅದು ಅಕ್ರಮ ಸ್ವಾಧೀನ ಇದ್ದರೆ, ಮೊದಲು ಮಾಡಬೇಕಾದ ಕೆಲಸ ಅದನ್ನು ಎವಿಕ್ಷನ್ ಮಾಡಬೇಕು. ಎವಿಕ್ಷನ್ ಆರ್ಡರ್ ಆಗಿದೆಯೋ ಇಲ್ಲವೋ? ಎವಿಕ್ಷನ್ ಆದಮೇಲೆ ಸ್ವಾಧೀನದಲ್ಲಿ ತೆಗೆದುಕೊಳ್ಳುವಂಥ ಕೆಲಸವನ್ನು ತಹಸೀಲ್ದಾರರು ಮಾಡುತ್ತಾರೆ. ಅದಕ್ಕೆ ಅವರು ಹೋಗಬೇಕಾಗಿಲ್ಲ. ಆ ಕೆಲಸ ಆಗಿದೆಯೋ ಇಲ್ಲವೋ ಹೇಳಲಿ.

ಶ್ರೀ ಹೆಚ್. ಎನ್. ನಂಜೇಗೌಡ : ಈಗ ಇಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ ಒಂದು ಸಲಹೆಯನ್ನು ಕೊಡುತ್ತೇನೆ. ಬೆಂಗಳೂರು ನಗರದಲ್ಲಿ ಏನಾಗಿದೆ ಎಂದು ಮೊದಲು ತಿಳಿದುಕೊಳ್ಳಬೇಕು. ಈ ಕೇಸ್ ಸರಿ, ಇದು ಕೃಷ್ಣಭಟ್ಟರ ಜಮೀನಿನ ವಿಚಾರ ಸರಿ. ಆದರೆ ಕೆಲವು ಸೊಸೈಟಿಯವರು ಸರ್ಕಾರದವರ ಜಮೀನನ್ನು, ಬಿಡಿಎದವರ ಜಮೀನನ್ನು ಕೃಷ್ಣಭಟ್ಟರಂಥವರು ಅಮಾಯಕರಿಗೆ ಮಾರಾಟ ಮಾಡಿದ್ದಾರೆ. ಅದನ್ನು ಕೆಲವು ತಬ್ಬಿಲಿಗಳು ಕೊಂಡುಕೊಂಡಿದ್ದಾರೆ. ಸಾಲ ಮಾಡಿ ಆ ಜಮೀನಿನ ಮೇಲೆ ಮನೆಯನ್ನು ಕಟ್ಟಿರುತ್ತಾರೆ. ಇದು ಅಷ್ಟು ಸುಲಭವಾಗಿ ಪರಿಹಾರ

ಮಾಡುವ ಸಮಸ್ಯೆಯಲ್ಲ. ಇದನ್ನೆಲ್ಲಾ ಇನ್‌ವೆಸ್ಟಿಗೇಟ್ ಮಾಡಿ ಯಾವ ರೀತಿ ಪರಿಹಾರ ಕಾಣಬೇಕು ಎಂಬುದನ್ನು ಮಾಡಬೇಕಾಗುತ್ತದೆ. ಏಕೆಂದರೆ ಈ ಕೊಂಡುಕೊಂಡಂತಹ ತಬ್ಬಲಿಗಳಿಗೆ ಅಲ್ಟರ್‌ನೇಟಿವ್ ಅರೆಂಜ್‌ಮೆಂಟ್ ಮಾಡಬೇಕಾಗುತ್ತದೆ. ಏಕೆಂದರೆ ಅವರು ಸಾಲ ಮಾಡಿ ದುಡ್ಡು ಖರ್ಚು ಮಾಡಿರುತ್ತಾರೆ. ಈಗಾಗಲೇ ನಾನು ಎರಡು ಕೇಸ್‌ನಲ್ಲಿ ಮಧ್ಯಸ್ಥಿಕೆ ವಹಿಸಿದ್ದೇನೆ. ಅಲ್ಲಿ ಏನಾಗಿದೆ ಎಂದರೆ ಸರ್ಕಾರದವರು ಎರಡು ಎಕರೆ ಜಮೀನನ್ನು ಟಾಟಾ ಫಂಡಮೆಂಟಲ್ ರಿಸರ್ಚ್ ಇನ್ಸಿಟಿಟ್ಯೂಟ್‌ರವರಿಗೆ ಬಿ.ಡಿ.ಎ. ಮುಖಾಂತರ ಕೊಟ್ಟುಬಿಟ್ಟಿದ್ದಾರೆ. ಆದರೆ ತಬ್ಬಲಿಗಳು ಯಾರೋ ಏರೆದುಕೊಟ್ಟ ಆಧಾರದ ಮೇಲೆ ಸಾಲ ಮಾಡಿ ಮನೆ ಕಟ್ಟಿಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೊಡುವುದಿಲ್ಲವಲ್ಲಾ.

ಶ್ರೀ ಹೆಚ್.ಎನ್. ನಂಜೇಗೌಡ : ಕಾಗೋಡು ತಿಮ್ಮಪ್ಪನವರೇ, ನಿಮಗೆ ಗೊತ್ತಿಲ್ಲವೆಂದು ಾಣುತ್ತದೆ. ಲೈಸೆನ್ಸ್ ಕೊಡುತ್ತಾರೆ, ಖಾತೆ ಮಾಡುತ್ತಾರೆ, ಎಲ್ಲಾ ಸುಳ್ಳು ರೆಕಾರ್ಡ್ ಮೇಲೆ ನಡೆದು ಹೋಗುತ್ತದೆ. ಇನ್ನೊಂದು ಕೇಸ್ ವಿಜಯಾ ಬ್ಯಾಂಕ್ ಹಿಂಭಾಗದಲ್ಲಿ 50 ಕೋಟಿ ರೂಪಾಯಿ ಾಪರ್ಟಿಯನ್ನು ಫಾಲ್ಸ್ ರೆಕಾರ್ಡ್ ಮೇಲೆ ಬಿ.ಡಿ.ಎ.ನವರು ಅವರಿಗೆ ಸ್ಯಾಂಕ್ಷನ್ ಮಾಡಿದ್ದರು. ಾಲ್ಸ್ ರೆಕಾರ್ಡ್ ಮೇಲೆ ಮಂಜೂರಾತಿ ಇದ್ದು ಅವರು ಸುಪ್ರೀಮ್ ಕೋರ್ಟ್‌ನವರೆಗೆ ಹೋಗಿ ಎವಿಕ್ಷನ್ ಮಾಡಿಕೊಂಡರು. ಈಗ ನಮ್ಮದು ಎಂದು ಕಾರ್ಪೊರೇಷನ್‌ನವರು ಕೇಸ್ ಹಾಕಿದ್ದಾರೆ. ಆ ೇಸ್ ವಾಪಸ್ಸು ತೆಗೆಯಬೇಕೆಂದು ಸರ್ಕಾರದವರು ಡಿ.ಓ. ಲೆಟರ್ ಕಳುಹಿಸಿದ್ದಾರೆ. ಬೆಂಗಳೂರಿನಲ್ಲಿ ೀಳುವವರು, ಕೇಳುವವರು ಯಾರೂ ಇಲ್ಲ ಎಂದು ಕೆಟ್ಟ ಮಾತಿನಲ್ಲಿ ಹೇಳಬೇಕಾಗುತ್ತದೆ. ಅದರ ಗ್ಗೆ ಸೀರಿಯಸ್ಸಾಗಿ ತಲೆಗೆ ಹಚ್ಚಿಕೊಂಡು ಏನು ನಡೆಯುತ್ತಿದೆ ಎಂದು ತಿಳಿದುಕೊಂಡು ಪರಿಹಾರವನ್ನು ಂಡುಹಿಡಿಯಬೇಕಾಗುತ್ತದೆ. ಈಗ ಯಾರಿಗೂ ಕಾನೂನಿನ ಭಯವೇ ಇಲ್ಲ. ಕಾಗೋಡು ತಿಮ್ಮಪ್ಪನವರು ೀಳುವಾಗ ಎವಿಕ್ಷನ್ ಪ್ರೊಸೀಡಿಂಗ್ಸ್ ಆಗಬೇಕು ಎಂದು ಹೇಳಿದರು. ಎವಿಕ್ಷನ್ ಪ್ರೊಸೀಡಿಂಗ್ಸ್‌ದಿಂದ ಷ್ಣಭಟ್ಟರಂಥವರಿಗೆ ಏನೂ ತೊಂದರೆಯಾಗುವುದಿಲ್ಲ. ಅಂಥವರೆಲ್ಲಾ ಜೇಬಿಗೆ ದುಡ್ಡು ಹಾಕಿಕೊಂಡಾಗಿದೆ. ದ್ದರಿಂದ ತಬ್ಬಲಿಗಳಿಗೆ ಕಷ್ಟ ಇದೆ. ಆದರಿಂದ ಅಮಾಯಕರಿಗೆ ತೊಂದರೆಯಾಗುತ್ತದೆ ಇದು ಒಂದು ೈಡ್ ಇದೆ. ಏಕೆಂದರೆ ಅವರಿಗೆ ನೀವು ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಬೇಕಾಗುತ್ತದೆ. ುಚ್ಚಿಟ್ಟು ಇವೆಲ್ಲಾ ವ್ಯವಹಾರವನ್ನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಇದರ ಬಗ್ಗೆ ನೋಡಿ. ಾವ ರೀತಿ ಮಾಡುವುದಕ್ಕಾಗುತ್ತದೆ ಎಂದು. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಹೀಗೆ ನಡೆಯುತ್ತಿದೆ ಎಂದು ಒಂದು ವಾರದ ಹಿಂದೆ ನಾನು ಲ್ಲಾ ಕೇಸ್‌ಗಳನ್ನು ಟಾಸ್ಕ್‌ಫೋರ್ಸ್‌ಗೆ ರೆಫರ್ ಮಾಡಿದ್ದೇನೆ. ಆದರೆ ಈ ಜಮೀನನ್ನು ಯಾರೂ ಡವರು ಕಳ್ಳತನ ಮಾಡಿಲ್ಲ. ಕಳ್ಳತನ ಮಾಡುವವರು ಕೋಟ್ಯಾಧೀಶರರು. ನಾವು ಯಾರಾದರೂ ಡವರು ಮಾಡಿದರೆ ಅವರ ಜೋಪಡಿ ಕಿತ್ತು ಹಾಕುತ್ತೇವೆ. ಆದರೆ ಇವರಿಗೆ ಮಾಡುತ್ತಿಲ್ಲ, ಕಳ್ಳತನ ಾಡುವವರು ಹಲವು ಶ್ರೀಮಂತರು. ಈಗ ಕೃಷ್ಣಭಟ್ಟರ ಹೆಸರನ್ನು ಹೇಳುತ್ತಾರೆ. ಈಗ ನಾನು ಎಲ್ಲಾ ಾಡಿದರೆ ಹೈಕೋರ್ಟಿಗೆ ಹೋಗುತ್ತಾರೆ, ಸುಪ್ರೀಮ್ ಕೋರ್ಟಿಗೆ ಯೋಗಿ ಸ್ಟೇ ತೆಗೆದುಕೊಂಡು

ಬರುತ್ತಾರೆ. ಅವರು ಸ್ಪೀ ತಂದರೆ ಅವರಿಗೆ ಏನಾದರೂ ಮಾಡುವುದಕ್ಕಾಗುತ್ತದೆಯೇ ಹೇಳಿ? ಆದ್ದರಿಂದ ಇದನ್ನು ಖಂಡಿತವಾಗಿ ನಿಲ್ಲಿಸುತ್ತೇನೆ. ನಾಳೆನೇ ನಮ್ಮ ಹಿರಿಯ ಅಧಿಕಾರಿಗಳನ್ನು ಕಳುಹಿಸುತ್ತೇನೆ. ಅದನ್ನು ನಿಲ್ಲಿಸುತ್ತೇನೆ. ಆದರೆ ಕೋರ್ಟ್ ಆರ್ಡರ್ ಕೊಟ್ಟರೆ ಏನಾದರೂ ಮಾಡುವುದಕ್ಕಾಗುತ್ತದೆಯೇ? ಆದ್ದರಿಂದ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ತೆರಳಿ.

ಉಪಾಧ್ಯಕ್ಷರು : ತಾವು ತಮ್ಮ ಸ್ಥಾನಕ್ಕೆ ಮರಳಿ.

(ಶ್ರೀ ಎಂ. ಶ್ರೀನಿವಾಸ್ ರವರು ತಮ್ಮ ಸ್ಥಾನಕ್ಕೆ ಮರಳಿದರು)

1997 ನೇ ಡಿಸೆಂಬರ್ ತಿಂಗಳಲ್ಲಿ ಮಂಗಳೂರಿನಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಸರ್ಕಾರದ ದೇಣಿಗೆ.

ಶ್ರೀ ಕೆ. ಜಯರಾಮಶೆಟ್ಟಿ (ಉಲ್ಲಾಳ) : ಮಾನ್ಯ ಅಧ್ಯಕ್ಷರೆ, ಈ ವರ್ಷದ ಡಿಸೆಂಬರ ತಿಂಗಳಲ್ಲಿ ಮಂಗಳೂರಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಹಳ ಅದ್ದೂರಿಯಾ ನಡೆಯಲಿದೆ. ಈ ಸಮ್ಮೇಳನದಲ್ಲಿ ಸುಮಾರು ಹತ್ತು ಸಾವಿರ ಪ್ರತಿನಿಧಿಗಳು ಹಾಗೂ ಒಂದು ಲ ವೀಕ್ಷಕರು ಭಾಗವಹಿಸುವ ನಿರೀಕ್ಷೆ ಇದೆ. ಇದರ ಜೊತೆಗೆ ಹೊಸದಾಗಿ 66 ಪುಸ್ತಕಗಳ ಬಿಡುಗಡೆಂ ಕಾರ್ಯಕ್ರಮ ಇದೆ. ಜೊತೆಗೆ ಮಂಗಳೂರಿನಲ್ಲಿ ಒಂದು ಕನ್ನಡ ಭವನವನ್ನು ನಿರ್ಮಾಣ ಮಾಡುವಂ ಗುರಿ ಇಟ್ಟುಕೊಂಡಿದ್ದೇವೆ. ಈಗಾಗಲೇ ಅಖಿಲ ಭಾರತ ಕರ್ನಾಟಕದ ಸಾಹಿತ್ಯ ಸಮ್ಮೇಳನದ ದಕ್ಷಿಣ ಕನ್ನಡ ಜಿಲ್ಲೆಯ ಏಳು ಜನ ಅಧ್ಯಕ್ಷರು ಆಗಿದ್ದಾರೆ. ಈ ರಾಜ್ಯದಲ್ಲಿ ಇಷ್ಟು ದೊ ಪ್ರಮಾಣದಲ್ಲಿ ಅಖಿಲ ಭಾರತ ಕರ್ನಾಟಕ ಸಾಹಿತ್ಯ ಸಮ್ಮೇಳನ ಇದುವರೆಗೂ ಆಗಿಲ್ಲ. ಆದ್ದರಿಂ ಮಂಗಳೂರು ಜನರು ಬಹಳಷ್ಟು ನಿರೀಕ್ಷೆ ಇಟ್ಟು ಒಂದು ಕೋಟಿಗೂ ಹೆಚ್ಚು ಖರ್ಚು ಮಾಡಿ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಿಂದ ಮಾಡುವ ನಿರೀಕ್ಷೆ ಇಟ್ಟುಕೊಂಡಿರುವುದರಿಂದ ಕರ್ನಾಟ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದೆ? ಈ ಸಮ್ಮೇಳನಕ್ಕೆ ತಮ್ಮಿಂದ ಸುಮಾರು ಲಕ್ಷ ರೂಪಾಯಿಯ ನಿರೀಕ್ಷೆ ಮಾಡುತ್ತಿದ್ದೇವೆ. ಆದ್ದರಿಂದ ತಾವು ದೊಡ್ಡ ಪ್ರಮಾಣದಲ್ಲಿ ದೇಣಿಗೆಯ ಕೊಡಬೇಕು. ಹಾಗೂ ಅಧ್ಯಕ್ಷರ ಆಯ್ಕೆಯಲ್ಲಿ ತಮ್ಮ ನಿಯಮಗಳು ಏನು? ಯಾರನ್ನು ಅಧ್ಯಕ್ಷರನ ಮಾಡುತ್ತಿದ್ದೀರಿ? ಈ ಬಗ್ಗೆ ಕರ್ನಾಟಕ ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ವಿಚಾರಗಳ ಸದನಕ್ಕೆ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಪ್ರತಿಬಾರಿಯ ಹಾಗೆ ಈ ಸಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವ ಅದ್ದೂರಿಯಾಗಿ ನಡೆಸತಕ್ಕಂಥದ್ದು ಸ್ವಾಗತ. ಇದುವರೆಗೆ ಯಾವಾಗ ಕನ್ನಡ ಸಾಹಿತ್ಯ ಸಮ್ಮೇಳನಗಳ ಮಾಡುತ್ತಾರೆ ಆವಾಗ ಅದಕ್ಕೆ ಪೂರಕವಾಗಿ ಹಣವನ್ನು ಸರ್ಕಾರ ಸಹಾಯ ಮಾಡುತ್ತಾ ಬಂದ ಹೋದ ಸಾರಿ ಹಾಸನದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿದಾಗ ನಮ್ಮ ಇಲಾಖೆಯಿಂದ ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ. ಆದರೆ ಹಣವನ್ನು ನೇರ